# ಸಮೀಕ್ಷೆ

**ಒಂದರಿಂದ ಹತ್ತನೆಯ ಸಂಪುಟದವರೆಗೆ**

**ದೇಶ ವಿದೇಶಗಳಲ್ಲಿ ನಡೆದ ಸಮಾರಂಭಗಳಲ್ಲಿ ಓದುಗರು ಸಂಕೇತಿ ಅಧ್ಯಯನ ಮಾಲೆಯ ಮಹಾಸಂಪುಟ ಸರಣಿಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. 'ಸಂವಾಚಿ' ಎಂಬ ಇ–ಮ್ಯಾಗಜಿನ್‌ನಲ್ಲಿ ಕೂಡ ಇಂಥ ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಪ್ರಶ್ನೆಗಳನ್ನೂ ಅವಕ್ಕೆ ಡಾ. ಪ್ರಣತಾರ್ತಿಹರನ್ ಅವರು ಕೊಟ್ಟ ಉತ್ತರಗಳನ್ನೂ ಒಂದು ಕ್ರಮದಲ್ಲಿ ಜೋಡಿಸಿ ಇಲ್ಲಿ ಕೊಡಲಾಗಿದೆ.**

1. **ಸಂಕೇತಿ ಸಮುದಾಯಕ್ಕೆ ಸಂಬಂಧಪಟ್ಟಂತೆ ಹೊರತಂದಿರುವ ಹತ್ತು ಮಹಾಸಂಪುಟಗಳನ್ನು ಕುರಿತಾಗಿ 'ಸಮೀಕ್ಷೆ' ಎಂಬ ಮಹಾಸಂಪುಟವನ್ನು ಹೊರತರುತ್ತಿದ್ದೀರಿ. ಇದರ ಮಹತ್ತ್ವವೇನು?**

ಈ ಸಂಪುಟದ ಸ್ವರೂಪದಲ್ಲಿಯೇ ಇದರ ಮಹತ್ತ್ವವಿದೆ. ಇದರಲ್ಲಿ ಎಲ್ಲ ಹತ್ತು ಸಂಪುಟಗಳ ಪ್ರಧಾನ ಸಂಪಾದಕರ ಮಾತು, ಸಂಪಾದಕರ ಮಾತು, ಮುನ್ನುಡಿ ಸೇರಿವೆ. ಪರಿವಿಡಿಯು ವಿವರವಾಗಿಯೇ ಇದೆ. ಪ್ರತಿ ಸಂಪುಟದ ಬಗೆಗೆ ವಿಮರ್ಶಾತ್ಮಕ ಲೇಖನಗಳಿವೆ, ಓದುಗರ ಪ್ರತಿಕ್ರಿಯೆಗಳಿವೆ. ಮೊದಲ ಸಂಪುಟದ ವೈಶಿಷ್ಟ್ಯದ ಕಾರಣದಿಂದಾಗಿ ಅದರಲ್ಲಿರುವ ಚಿತ್ರಗಳು ಮತ್ತು ಪಟ್ಟಿಗಳ ವಿವರಗಳನ್ನೂ, ಉಪಸಂಹಾರ ಭಾಗವನ್ನೂ ಸೇರಿಸಲಾಗಿದೆ. ಈ ಸಂಪುಟವನ್ನು ಮಾಹಿತಿಗಾಗಿ ಓದಿದವರಿಗೆ ಎಲ್ಲ ಹತ್ತು ಸಂಪುಟಗಳ ವಿವರಗಳು ತಿಳಿಯುತ್ತವೆ, ಸಂಶೋಧನಾತ್ಮಕವಾಗಿ ಅವಲೋಕಿಸಿದವರಿಗೆ ಸಾಮಗ್ರಿವಿಶೇಷದ ಸುಳುಹು ದೊರೆಯುತ್ತದೆ. ಮುಖ್ಯವಾಗಿ ಇಡೀ ಹತ್ತು ಸಂಪುಟಗಳ ಹೂರಣವು ಈ ಒಂದೇ ಸಂಪುಟದ ಓದುಗರಿಗೆ ಒಂದೇ ಓದಿನಲ್ಲಿ ದಕ್ಕುವುದರಿಂದ ಸಮುದಾಯದ ಒಟ್ಟು ಚಿತ್ರವು ವಿಶಿಷ್ಟವಾಗಿ ಅನುಭವಕ್ಕೆ ಬರುತ್ತದೆ. ತಮ್ಮ ಆಸಕ್ತಿಯ ವಿಷಯವನ್ನು ವಿವರವಾಗಿ ಓದುವುದಕ್ಕೆ ತಕ್ಕ ಆಯ್ಕೆ ಇದರಿಂದ ಸಾಧ್ಯ. ಎಲ್ಲ ಹತ್ತು ಸಂಪುಟಗಳು ದೊರಕದವರಿಗೂ, ಅಷ್ಟನ್ನೂ ಓದುವ ಸಮಯಾವಕಾಶವೂ ಶಕ್ತಿಯೂ ಅಗತ್ಯವೂ ಇಲ್ಲದವರಿಗೂ ಇದು ಉಪಯುಕ್ತವಾಗಿದೆ. ಮುಖ್ಯವಾಗಿ ಸಮುದಾಯ ಅಧ್ಯಯನದಲ್ಲಿ ಆಸಕ್ತರಾದವರಿಗೆ ಇದು ಹೆಚ್ಚು ಅವಶ್ಯ. ಹತ್ತು ಸಂಪುಟಗಳ ವಿಮರ್ಶೆಯು ವಿಸ್ತಾರವಾಗಿಯೇ ಬಂದಿದೆ.

2. **ಮೊದಲ ಹತ್ತು ಸಂಪುಟವನ್ನು ಕುರಿತ ವಿವರ ಎಂದಿದ್ದೀರಿ. ಈ ಮಾಲೆಯು ಮುಂದುವರಿಯುವುದೆಂದು ಅದರ ಅರ್ಥವೆ? ಇದರ ಅಗತ್ಯವಿದೆಯೆ?**

ಹೌದು, ಮುಂದುವರಿಯುತ್ತದೆ. ಸಂಶೋಧಕನನ್ನು ಕುತೂಹಲವು ಸೆಳೆಯುತ್ತದೆ, ಸವಾಲುಗಳು ಎದುರುಗೊಳ್ಳುತ್ತವೆ. ಇದೊಂದು ಆನಂದಯಾನ. ಈ ಯಾನದ ಉಲ್ಲಾಸವೇ ಅತಿಶಯವಾದುದು. ಯಾವುದೇ ಸಮುದಾಯದ ಅಧ್ಯಯನವು ಆಯಾ ಸಮುದಾಯಕ್ಕೆ ಮಿತವಾಗುವುದಿಲ್ಲ. ಒಟ್ಟು ಮಾನವಸಮಾಜದ ಅರ್ಥವಂತಿಕೆಗೆ ವಿಸ್ತರಿಸುತ್ತದೆ. ಇದೊಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ; ಈವರೆಗೆ ನೋಡುತ್ತಿರುವ ರಾಜಕೀಯ ಇತಿಹಾಸಕ್ಕೆ ಪೂರಕವಾಗಿ ಬರುವ ಈ ಬಗೆಯ ಅಧ್ಯಯನವು ಇತಿಹಾಸವನ್ನು ಹೆಚ್ಚು ಅರ್ಥಪೂರ್ಣವೂ ಉಪಯುಕ್ತವೂ ಆಗುವಂತೆ ಮಾಡುತ್ತದೆ. ಅಲ್ಲದೆ, ಯಾವುದೇ ವಿಷಯದ ಬಗೆಗೆ ಹೆಚ್ಚು ಮಾಹಿತಿ ಎಂದರೆ ಅದು ಹೆಚ್ಚು ತಿಳಿವು, ಹೆಚ್ಚಿನ ವಿಶ್ಲೇಷಣೆಗೆ ದಾರಿ ಎಂದೇ ಅರ್ಥ.

3. **ಹಾಗಾದರೆ ಇದು ಮುಗಿಯುವುದು ಎಂದು?**

ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಕೀಯ ವಿಜ್ಞಾನ, ತಂತ್ರಜ್ಞಾನ ಇಂಥ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಇಂಥ ಪ್ರಶ್ನೆಯನ್ನು ಯಾರೂ ಕೇಳುವುದಿಲ್ಲ, ಕೇಳಲು ಸಾಧ್ಯವೂ ಇಲ್ಲ; ಇದೂ ಹಾಗೆಯೇ. ಯಾರದೇ ಬದುಕು ವಿಸ್ತಾರವಾದುದು, ಸಂಕೀರ್ಣವಾದುದು, ಜಗತ್ತಿನ ಎಲ್ಲ ಮಾನವರು, ಪ್ರಾಣಿಗಳು, ಕೀಟಗಳು, ಪಕ್ಷಿಗಳು, ಸಸ್ಯಗಳು ಮತ್ತು ಜಡವಸ್ತುಗಳ ಜೊತೆ ಹೆಣೆದುಕೊಂಡಂಥದು. ಅಲ್ಲದೆ ಬದುಕೆಂಬುದು ನಿತ್ಯ ಪರಿವರ್ತನಶೀಲವಾದುದು. ಬದುಕು

ವಿಕಾಸಶೀಲವೂ ಆನಂದಮಯವೂ ಅರ್ಥಪೂರ್ಣವೂ ಆಗಲು ಅದನ್ನು ವಿಶ್ಲೇಷಿಸಿಕೊಳ್ಳುತ್ತ ಮುಂದುವರಿಯಬೇಕಾದುದೂ ಅಗತ್ಯ.

**4. ಅತಿಪುಟ್ಟ ಸಮುದಾಯಗಳಿಗೂ ಈ ಮಾತು ಅನ್ವಯಿಸುತ್ತದೆಯೆ?**

ಸಮುದಾಯವು ಪುಟ್ಟದಾದರೂ ಬದುಕು ದೊಡ್ಡದು ಮತ್ತು ಸಂಕೀರ್ಣವಾದುದು. ಅಲ್ಲದೆ ಅತಿ ಪುಟ್ಟ ಸಮುದಾಯಗಳು ನಶಿಸಿಹೋಗುವ ಸಾಧ್ಯತೆಯು ಹೆಚ್ಚು. ಇನ್ನು ಕೆಲವೇ ದಶಕಗಳಲ್ಲಿ ಅನೇಕ ಭಾಷೆಗಳು ಕಾಣೆಯಾಗಿಹೋಗುವ ಭೀತಿ ಇದೆ. ಅವುಗಳ ಜೊತೆಜೊತೆಗೇ ಅನೇಕ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು. ಸಂಕೇತಿ ಸಮುದಾಯದ ಒಟ್ಟು ಜನಸಂಖ್ಯೆಯು ಮೂವತ್ತು ಸಾವಿರ. ಕೇರಳ, ತಮಿಳುನಾಡು ಮತ್ತು ಕರ್ನಾಟಕದ ಸಂಕೇತಿ ಸಮುದಾಯಗಳು ಪ್ರತ್ಯೇಕ ಅಸ್ತಿತ್ವವನ್ನೇ ಹೊಂದಿವೆ. ಕರ್ನಾಟಕವೊಂದರಲ್ಲೇ ಅದರ ಐದು ಉಪಸಮುದಾಯಗಳಿವೆ; ಈ ಐದರ ಭಾಷಾಸ್ವರೂಪವೂ ಭಿನ್ನವಾಗಿದೆ. ಅತಿಚಿಕ್ಕ ಉಪಸಮುದಾಯದ ಜನಸಂಖ್ಯೆ 600; ಅತಿದೊಡ್ಡ ಉಪಸಮುದಾಯದ ಜನಸಂಖ್ಯೆ 15000. ಈ ಭಾಷೆಗಳೂ ಉಪಸಮುದಾಯಗಳೂ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಮುನ್ನ ಈ ಅಧ್ಯಯನವು ನಡೆಯಬೇಕಾದ ಅಗತ್ಯವಿದೆ. ತಮಿಳುನಾಡಿನಲ್ಲಿ ಕೆಲವು ದಶಕಗಳ ಹಿಂದೆ ಇದ್ದ 50000 ಸಂಕೇತಿಗಳು ಅನ್ಯಸಮುದಾಯಗಳ ಜತೆ ವಿಲೀನವಾಗುವ ಪ್ರಕ್ರಿಯೆ ವೇಗವಾಗಿ ನಡೆದು ಈಗ ಅವರ ಸಂಖ್ಯೆ ಐದು ಸಾವಿರಕ್ಕೆ ಇಳಿದಿದೆ. ಒಂಬತ್ತು ಶತಮಾನಗಳ ಹಿಂದೆ ಈಗಿನ ತಮಿಳುನಾಡಿನ ಶೆಂಕೊಟ್ಟೈ ಪ್ರಾಂತದಿಂದ ಕರ್ನಾಟಕಕ್ಕೆ ವಲಸೆ ಬಂದ ಅದಕ್ಕಿಂತಲೂ ದೊಡ್ಡ ಸಂಖ್ಯೆಯ ಸಂಕೇತಿಗಳಲ್ಲಿ ಈಗ ಉಳಿದಿರುವವರು ಕೇವಲ 25000 ಜನ. 900 ವರ್ಷಗಳ ಹಿಂದಿನ ತಮಿಳಿನ ಕೆಲವು ವಿಶೇಷ ರೂಪಗಳು ಇನ್ನೂ ಉಳಿದುಕೊಂಡಿರುವುದು ಕರ್ನಾಟಕದ ಸಂಕೇತಿಗಳ ಭಾಷೆಯಲ್ಲಿ. ಹಾಗಾಗಿಯೇ ಈ ಅಧ್ಯಯನಕ್ಕೆ ಐತಿಹಾಸಿಕ ಮಹತ್ತ್ವವೂ ಇದೆ.

**5. ಈ ತುರ್ತೇ ಸಂಕೇತಿ ಅಧ್ಯಯನಕ್ಕೆ ನಿಮ್ಮನ್ನು ಹಚ್ಚಿತೆ?**

ಇಲ್ಲ. ನಾನು ಸಂಕೇತಿ ಅಧ್ಯಯನಕ್ಕೆ ತೊಡಗಿದಾಗ ಆ 'ತುರ್ತಿನ' ಕಲ್ಪನೆ ಇರಲಿಲ್ಲ. ವಾಸ್ತವವಾಗಿ ಕರ್ನಾಟಕದ ಸಂಕೇತಿಗಳಿಗೆ ತಮಿಳುನಾಡು ಮತ್ತು ಕೇರಳದ ಸಂಕೇತಿಗಳ ಜತೆಗೆ ಒಂಬತ್ತು ಶತಮಾನಗಳಿಂದಲೂ ಸಂಪರ್ಕ ಇದ್ದಂತಿಲ್ಲ; ಇತ್ತೀಚಿನ ಇತಿಹಾಸದಲ್ಲಂತೂ ಇಲ್ಲವೇ ಇಲ್ಲ. ಕರ್ನಾಟಕದ ಸಂಕೇತಿಗಳ ಸಮಗ್ರ ಚಿತ್ರವೂ ಆಗ ನನಗಿರಲಿಲ್ಲ. ಇದೆಲ್ಲಾ ಸ್ಪಷ್ಟವಾದುದು ಅಧ್ಯಯನವು ಮುಂದುವರಿದ ಮೇಲೆ. ಅಲ್ಲದೆ ನನಗೆ ಸಂಕೇತಿ ಅಧ್ಯಯನದ ಆಲೋಚನೆಯೇ ಆಗ ಇರಲಿಲ್ಲ; ತೌಲನಿಕ ಸಾಹಿತ್ಯದಲ್ಲಿ ಆಸಕ್ತಿಯಿತ್ತು. ವರಕವಿ ಬೇಂದ್ರೆ ಅಥವಾ ಕನ್ನಡ ನವ್ಯಕಾವ್ಯದ ಪ್ರವರ್ತಕರಾದ ಅಡಿಗರನ್ನು ಯೂರೋಪಿನ ಕವಿಗಳ ಜತೆಗೆ ಹೋಲಿಸಿ ಅಧ್ಯಯನ ಮಾಡಲು ಯೋಜನೆ ಹಾಕಿಕೊಂಡೆ; ಅದು ಆಗದೇ ಹೋಯಿತು. ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನಕ್ಕೆ ಪೀಠಿಕೆ ಹಾಕಿದೆ. ಅದೂ ಅಂಗೀಕಾರವಾಗಲಿಲ್ಲ. ಆ ಮೇಲೆಯೇ ಸಂಕೇತಿ ಅಧ್ಯಯನದ ಯೋಚನೆ ಬಂತು. ಅದಕ್ಕೂ ಕಾರಣವಿತ್ತು. 1983ರಲ್ಲಿ ಎಂ.ಎ. ಮುಗಿಸಿಕೊಂಡು ನನ್ನ ಹಳ್ಳಿಗೆ ಹೋದೆ; ಅಲ್ಲೇ ಪದವಿಪೂರ್ವ ಕಾಲೇಜಿನ ಒಪ್ಪೊತ್ತಿನ ಉಪನ್ಯಾಸಕನಾದೆ. ಪಾಠಪ್ರವಚನವಿಲ್ಲದ ವೇಳೆಯಲ್ಲಿ ಕ್ಷೇತ್ರಕಾರ್ಯಮಾಡಿದೆ; ನಮ್ಮೂರು ಬಸವಾಪಟ್ಟಣ ಮತ್ತು ಅದರ ಸುತ್ತಣಹಳ್ಳಿಗಳಲ್ಲಿರುವ ಸಂಕೇತಿಗಳಿಂದ ಕಥೆ, ಐತಿಹ್ಯ, ಗಾದೆ, ಒಗಟು, ಹಾಡುಗಳ ಸಂಗ್ರಹ ಮಾಡಿದೆ. ಹೀಗೆ ಪಕ್ಕದ ಒಂದು ಹಳ್ಳಿಯಲ್ಲಿ 10000 ಪುಟಗಳಷ್ಟು ಹಾಡುಗಳನ್ನು ಒಬ್ಬರೇ ವೃದ್ಧೆಯಿಂದ ಸಂಗ್ರಹಿಸಿದೆ. ಒಂದು ಸಂಜೆ ಆ ಹಳ್ಳಿಯಿಂದ ಹಿಂದಿರುಗುತ್ತಿದ್ದೆ. ದಾರಿಯಲ್ಲಿ ಸಂಕೇತಿಗಳಿಗೆ ಸೇರಿದ ಅಡಕೆ ತೋಟಗಳಿದ್ದವು. ಒಂದು ತೋಟದ ಒಬ್ಬರು ಇನ್ನೊಂದು ತೋಟದಲ್ಲಿದ್ದ ಸಹರೈತನಿಗೆ

ಕೂಗಿ ಹೇಳುತ್ತಿದ್ದರು. "ಇವನು ಏಕೆ ಹೀಗೆ ನಾಯಿ ಹಾಗೆ ಅಲೆಯುತ್ತಿದ್ದಾನೆ ಗೊತ್ತೇನೋ? ಪಿಎಚ್.ಡಿ. ಮಾಡಕ್ಕೆ !" ಆದರೂ ನನಗೆ ಸಂಕೇತಿಗಳ ಬಗೆಗೆ ಪಿಎಚ್.ಡಿ.ಗಾಗಿ ಅಧ್ಯಯನ ಮಾಡುವ ಆಲೋಚನೆ ಆಗ ಬರಲಿಲ್ಲ. ಎರಡು ವಿಷಯಗಳು ನಿರಾಕರಣೆಗೊಂಡಾಗ ಆ ರೈತರ ಮಾತು ಜ್ಞಾಪಕಕ್ಕೆ ಬಂತು. ಆ ವೇಳೆಗಾಗಲೇ ಸಂಗ್ರಹಿಸಿದ್ದ ಅಪಾರ ಸಾಮಗ್ರಿಯು ನೆರವಿಗೆ ಬರಬಹುದೆಂಬ ನಿರೀಕ್ಷೆಯೂ ಉಂಟಾಯಿತು. ಸಂಕೇತಿ ಸಮುದಾಯದ ಬಗೆಗೆ ಅಧ್ಯಯನ ಮಾಡಲು ಆರಿಸಿಕೊಂಡೆ.

**6. ಅಂದರೆ ಸಂಕೇತಿ ಅಧ್ಯಯನವು ನಿಮ್ಮ ಪ್ರಥಮ ಆಯ್ಕೆಯಲ್ಲ !**

ಪ್ರಥಮ ಆಯ್ಕೆಯಲ್ಲ, ಆದರೆ ಉಚಿತವಾದ ಆಯ್ಕೆ. ಮೊದಲು ಆರಿಸಿಕೊಂಡ ಎರಡು ವಿಷಯಗಳಲ್ಲಿ ನಾನು ಆಸೆ ಇಟ್ಟುಕೊಂಡಿದ್ದೇನೇ ಹೊರತು ಆ ಕ್ಷೇತ್ರಗಳಲ್ಲಿ ಕೃಷಿ ಮಾಡಿರಲಿಲ್ಲ. ತೌಲನಿಕ ಸಾಹಿತ್ಯದ ಅಧ್ಯಯನದ ಆಸೆ ಹುಟ್ಟಿದ್ದು ನಾನು ಪಾಶ್ಚಾತ್ಯ ಸಾಹಿತ್ಯವನ್ನು ವಿಶೇಷ ವಿಷಯವಾಗಿ ಅಧ್ಯಯನ ಮಾಡಿದ್ದರಿಂದ. ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನದಲ್ಲಿ ಆಸಕ್ತಿ ಮೂಡಿದ್ದು ಆ ಭಾಗದ ಅಧ್ಯಯನವು ರೋಚಕವಾಗಿರುತ್ತದೆ ಎಂದು ಅಂದುಕೊಂಡದ್ದರಿಂದ. ಆದರೆ ಸಂಕೇತಿ ಅಧ್ಯಯನದ ಯೋಚನೆ ಬಂದದ್ದು ನಾನು ಅದಾಗಲೇ ಮಾಡಿದ್ದ ಒಂದಿಷ್ಟು ಕೆಲಸದಿಂದ. ಹಾಗಾಗಿ ಅದು ಸಹಜ ಆಯ್ಕೆಯಾಗಿತ್ತು. ಆ 'ಒಂದಿಷ್ಟು' ಕೆಲಸವನ್ನು ಮಾಡಿದ್ದೂ ಅನುದ್ದಿಶ್ಯವಾಗಿ ಮತ್ತು ಹವ್ಯಾಸವಾಗಿ ಎಂಬುದು ನಿಜ. ಆದರೆ ಅದು ಆ ಕ್ಷೇತ್ರದ ಹೆಚ್ಚಿನ ಅಧ್ಯಯನದ ಸಾಧ್ಯತೆಗಳ ಸಹಜಮಾರ್ಗಗಳ ಹೊಳಹು ಮೂಡಿಸಿತ್ತು. ಆ ದಿಕ್ಕಿನಲ್ಲಿ ಸೆಳೆತ ಉಂಟಾಗುವಷ್ಟು ಆಧಾರವೂ ಸಿಕ್ಕಿತ್ತು.

**7. ಸಂಶೋಧನೆಯ ಮಾರ್ಗದರ್ಶಕರಾಗಿ ಡಾ. ಅಂಬಳಿಕೆ ಹಿರಿಯಣ್ಣ ಅವರನ್ನೇ ಆರಿಸಿಕೊಳ್ಳಲು ವಿಶೇಷ ಕಾರಣವಿತ್ತೇ?**

ಡಾ. ಅಂಬಳಿಕೆ ಹಿರಿಯಣ್ಣ ಅವರು ಖ್ಯಾತ ಜಾನಪದತಜ್ಞರು; ಅನೇಕ ಹೊಸ ಉಪಕ್ರಮದ ಗ್ರಂಥಗಳನ್ನೂ ರಚಿಸಿರುವವರು; ತಾತ್ತ್ವಿಕ ಜಾನಪದದಲ್ಲಿ ಅಧಿಕಾರವಾಣಿಯಾಗಿರುವವರು; ಜಾನಪದ ವಿಶ್ವವಿದ್ಯಾಲಯದ ಮೊದಲ ಕುಲಪತಿಯೆಂಬ ಹೆಗ್ಗಳಿಕೆಗೂ ಪಾತ್ರರಾದವರು. ಅಂಥವರು ನನ್ನ ಸಂಶೋಧನೆಗೆ ಮಾರ್ಗದರ್ಶಕರು ಎಂಬುದು ನನಗೆ ಹೆಮ್ಮೆಯ ವಿಷಯ.

ಆದರೆ ನಾನು ನನ್ನ ಸಂಶೋಧನೆಗೆ ಮಾರ್ಗದರ್ಶಕರಾಗಬೇಕಾಗಿ ಅವರನ್ನು ಪ್ರಾರ್ಥಿಸಿದ ಹೊತ್ತಿನಲ್ಲಿ ಅವರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಒಬ್ಬ ತರುಣ ಅಧ್ಯಾಪಕರಾಗಿದ್ದರು. ಅವರಿಗೆ ಪಿಎಚ್.ಡಿ. ಪದವಿಯು ಆಗತಾನೆ ಪ್ರಾಪ್ತವಾಗಿತ್ತು. ಆದರೂ ಅವರನ್ನೇ ಮಾರ್ಗದರ್ಶಕರಾಗಿ ಆರಿಸಿಕೊಂಡಿದ್ದೆ. ನನ್ನ ಆಯ್ಕೆ ಎಷ್ಟು ಉಚಿತವಾಗಿತ್ತೆಂಬುದು ವೈಯಕ್ತಿಕವಾಗಿ ನನಗೆ ಆ ದಿನಗಳಲ್ಲೇ ಅನುಭವಕ್ಕೆ ಬಂದಿತ್ತು. ಅವರು ಒಂದು ವಿಶ್ವವಿದ್ಯಾಲಯದ ಕುಲಪತಿಗಳಾಗಿರುವ ಈ ಹೊತ್ತು ಅದು ಈಗ ಇನ್ನೂ ನಿಚ್ಚಳಗೊಂಡಿದೆ.

ಯಾವ ಅಭಿಪ್ರಾಯಗಳನ್ನೂ ಹೇರದೆ ಸಂಶೋಧನೆಯ ಸಹಜಪಾತಳಿಯಲ್ಲಿ ಸಾಗುವಂತೆ ನಿರ್ದೇಶಿಸಿ ಆ ಮಾರ್ಗದಲ್ಲಿ ಸ್ವತಂತ್ರವಾಗಿ ಮುಂದುವರಿಯಲು ಅನುವುಮಾಡಿಕೊಟ್ಟ ನುರಿತ ಮಾರ್ಗದರ್ಶಕ ಅವರು. ಹೊಸಪೀಳಿಗೆಯ ವಿದ್ವಾಂಸರಾದ ಅವರಿಗೆ ದೀರ್ಘಾನುಭವದ ಪಕ್ವ ವಿದ್ವಾಂಸರು ಮಾರ್ಗದರ್ಶಕರಾಗಿ ದೊರೆತಿದ್ದರು. ಅಲ್ಲದೆ ಅವರು ಸಹಜವಾಗಿಯೇ ಹೊಸ ಸಂಶೋಧನ ಪ್ರವೃತ್ತಿಗಳಿಗೂ ತೆರೆದುಕೊಂಡಿದ್ದರು. ಅವೆರಡರ ಪ್ರಯೋಜನವೂ ನನಗಾಯಿತು. ನನ್ನ ಮಾಹಿತಿಯ ವಿವರ ಮತ್ತು ತೀರ್ಮಾನಗಳಿಗೆ ಸಂಬಂಧಿಸಿದಂತೆ ಸಂಕೇತಿ ಸಮುದಾಯದ ಯಾರನ್ನೂ ಸುಲಭವಾಗಿ ಮೆಚ್ಚಿಸುವುದು ಸಾಧ್ಯವಿಲ್ಲವೆಂಬ ಅರಿವು ನನಗಿತ್ತು. ಈ ವಿಷಯದ ಸ್ವರೂಪವೇ ಅಂಥದು. ಪ್ರಾದೇಶಿಕ ಕವಲುಗಳು, ಆಚಾರ ವೈವಿಧ್ಯ, ಮನೆತನ

ವಿಶೇಷಗಳು, ಮೂರು ಭಾಷಾ ರಾಜ್ಯಗಳಲ್ಲಿ ಈ ಸಮುದಾಯದ ಜನರು ಚದುರಿಹೋಗಿ ಆಯಾ ಪ್ರದೇಶಗಳ ವೈಶಿಷ್ಟ್ಯಗಳನ್ನು ಬಹಳವಾಗಿ ಸ್ವೀಕರಿಸಿರುವುದು, ಭಿನ್ನ ಪರಿಸರಗಳು ಮತ್ತು ಸಂದರ್ಭಗಳಿಗೆ ತಕ್ಕಂತೆ ಆಗಿರುವ ಭಿನ್ನ ಬೆಳವಣಿಗೆಗಳು, ವಿಪರೀತವಾದ ಭಾಷಾಭಿನ್ನತೆಯ ಪ್ರಭೇದಗಳು – ಇವೆಲ್ಲವೂ ಸಂಕೇತಿ ಸಮುದಾಯದ ಬಗೆಗೆ ಇದ್ದ ಹೆಚ್ಚಿನ ಸವಾಲುಗಳು. ಅದಕ್ಕಾಗಿ ಪ್ರತಿಯೊಂದು ಪ್ರಾದೇಶಿಕ ಉಪಸಮುದಾಯಕ್ಕೂ ಸಂಬಂಧಿಸಿದಂತೆ ಒಬ್ಬೊಬ್ಬ ವಿದ್ವಾಂಸರನ್ನು (ಅನಧಿಕೃತ) ಮಾರ್ಗದರ್ಶಕರಾಗಿ ಸ್ವೀಕರಿಸಿದೆ. ಈ ಸಮುದಾಯದ ನಿಕಟ ಪರಿಚಯವಿರುವ ಸಂಕೇತಿಯೇತರ ಬ್ರಾಹ್ಮಣರೊಬ್ಬರನ್ನೂ, ಬ್ರಾಹ್ಮಣೇತರರೊಬ್ಬರನ್ನೂ ಹೆಚ್ಚಿನವರಾಗಿ ಸ್ವೀಕರಿಸಿದೆ. ಡಾ. ಅಂಬಳಿಕೆ ಹಿರಿಯಣ್ಣ ಅವರು ವಾಸ್ತವಾಂಶಗಳ ಆಧಾರದ ಮೇಲೆ ಸಮಗ್ರ ಅಧ್ಯಯನ ನಡೆಯಬೇಕೆಂದು ಸಂಕಲ್ಪಿಸಿ ನೀಡಿದ ಸೂಚನೆಗಳೇ ಹಾಗಿದ್ದವು. ಹಾಗಾಗಿ ಅವರಿಗೂ ನನಗೂ ಸಮಾಧಾನವಾಗುವಂತೆ ಸಂಪ್ರಬಂಧವು ಸಿದ್ಧವಾಯಿತು.

ಇದು ಹೀಗಿದ್ದರೂ, ನನ್ನ ಸಂಶೋಧನ ವಿಷಯಕ್ಕೆ ಈ ಬಾರಿಯೂ ವಿಶ್ವವಿದ್ಯಾಲಯವು ಸಮ್ಮತಿಸದೇ ಹೋಗಬಹುದೆಂಬ ಅಂಜಿಕೆ ಇದ್ದೇ ಇತ್ತು. ಹಾಗಾಗಿ ಅದಕ್ಕೆ ಸಮ್ಮತಿ ದೊರೆಯುವವರೆಗೂ ಸಂಶೋಧನ ವಿಷಯದ ಬಗೆಗಾಗಲಿ ಮಾರ್ಗದರ್ಶಕರ ಬಗೆಗಾಗಲಿ ಮೋಹವನ್ನು ಬೆಳೆಸಿಕೊಳ್ಳದೆ ನಿರ್ಲಿಪ್ತನಾಗಿ ಕಾದಿದ್ದೆ.

**8. ಇದ್ದಕ್ಕಿದ್ದಹಾಗೆ ಈ ಮಹಾಸಂಪುಟ ಮಾಲೆಗೆ ಹೇಗೆ ಮನಸ್ಸು ಮಾಡಿದಿರಿ?**

'ಇದ್ದಕ್ಕಿದ್ದಹಾಗೆ' ಅಲ್ಲ. ಅದೂ ಒಂದು ಸಹಜ ಬೆಳವಣಿಗೆ. ನನ್ನ ಸಂಪ್ರಬಂಧವನ್ನು ಪ್ರಕಟಿಸಲು ಪ್ರಯತ್ನಿಸಿದೆ. ಆತ್ಮೀಯರೂ ಹಿರಿಯರೂ ಆದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಆಗ ಅದನ್ನು ತಡೆದರು. ಇನ್ನಷ್ಟು ಸಂಶೋಧನೆ ಮಾಡಿ ಸಂಪ್ರಬಂಧದಲ್ಲಿ ಇರಬಹುದಾದ ಅರೆಕೊರೆಗಳನ್ನು ನಿವಾರಿಸಿ ಆನಂತರವೇ ಪ್ರಕಟಿಸುವಂತೆ ಆಗ್ರಹಿಸಿದರು. ಆಗ ಸಮುದಾಯ ಅಧ್ಯಯನ ಕೇಂದ್ರವನ್ನು ಹುಟ್ಟುಹಾಕಿದೆ. ಭಾರತದ ಎಲ್ಲ ಸಂಸ್ಕೃತಿಘಟಕಗಳ ಅಧ್ಯಯನದ ಉದ್ದೇಶ ಅದಕ್ಕಿತ್ತು. ಆ ಮೂಲಕ 25 ಕಿರುಹೊತ್ತಗೆಗಳನ್ನು ತರಲಾಯಿತು. ಇದರಿಂದ ಪ್ರೇರಣೆಗೊಂಡು ಎಲ್ಲ ಸಮುದಾಯಗಳೂ ತಮ್ಮ ತಮ್ಮ ಬಗೆಗೆ ಹೊತ್ತಗೆಗಳನ್ನು ಸಿದ್ಧಪಡಿಸಿ ತಾವೇ ಪ್ರಕಟಿಸಿದವು. ಅದೊಂದು ಅಭಿಯಾನವೇ ಆಯಿತು.

ಆ ವೇಳೆಗೆ ನನಗೆ ಮೈಸೂರಿನಿಂದ ಹಾಸನಕ್ಕೆ ವರ್ಗವಾಯಿತು. ಹತ್ತು ವರ್ಷಗಳ ಹೆಚ್ಚಿನ ಅಧ್ಯಯನದ ನಂತರವೂ ನನ್ನ ಸಂಪ್ರಬಂಧವು ನ್ಯೂನಾತಿರೇಕಗಳಿಂದ ಮುಕ್ತವಾಗಿರುವುದು ಕಂಡಿತು. ಸಮುದಾಯ ಅಧ್ಯಯನದ ಈ ಕೆಲಸವನ್ನು ನಿಲ್ಲಿಸಿ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಹವಣಿಸಿದೆ. ಯಾವ ಸಮಾರಂಭಗಳಿಗೆ ಹೋದರೂ ಸಾಹಿತ್ಯೇತರ ಆವೇಶಗಳೇ ಕಾಣುತ್ತಿದ್ದವು. ಮನಸ್ಸು ಕದಡುವುದು ತಕ್ಕುದಲ್ಲವೆನಿಸಿತು. ಹಾಸನ ಜಿಲ್ಲೆಯು ಸಂಕೇತಿ ಸಮುದಾಯದ ಮೂಲಕೇಂದ್ರ. ಅಲ್ಲಿರುತ್ತ ಕ್ಷೇತ್ರಕಾರ್ಯದ ಅವಕಾಶಗಳನ್ನು ಕಳೆದುಕೊಳ್ಳಬಾರದೆನಿಸಿತು. ಹಾಸನದ ಆಕಾಶವಾಣಿ ಕೇಂದ್ರದಲ್ಲಿದ್ದ ಕೃಷಿತಜ್ಞರು ಪ್ರಸಾರಮಾಡುತ್ತಿದ್ದ ಕೃಷಿಕಾರ್ಯಕ್ರಮಗಳಲ್ಲಿ ಸಂಕೇತಿ ಕೃಷಿಕರ ಸಂದರ್ಶನಗಳೂ ಇರುತ್ತಿದ್ದವು. ಅಂಥ ಎಲ್ಲ ಸಂದರ್ಶನಗಳನ್ನೂ ಒಟ್ಟಾಗಿಸಿದರೆ ಒಳ್ಳೆಯ ದಾಖಲೆಯಾಗುತ್ತದೆ ಎನಿಸಿತು. ಮಹಾಸಂಪುಟಗಳ ಕಲ್ಪನೆಯ ಬೀಜ ಅದು.

**9. ಪ್ರತಿ ಸಮುದಾಯದವರೂ ತಮ್ಮ ತಮ್ಮ ಬಗೆಗೆ ಹೊತ್ತಗೆಗಳನ್ನು ಪ್ರಕಟಿಸುವ ಅಭಿಯಾನವೇ ಆರಂಭವಾಯಿತು ಎಂದಿರಿ. ಇದರಿಂದ ಜಾತೀಯತೆ ಬೆಳೆದಂತಾಗಲಿಲ್ಲವೆ?**

ಎಂಥ ಅಪಪ್ರಯೋಗ ! ಜಾತಿ ಬೇರೆ, ಜಾತಿ ಅಧ್ಯಯನ ಬೇರೆ, ಜಾತೀಯತೆ ಬೇರೆ. ವಿಶ್ವವಿದ್ಯಾಲಯಗಳು ಇಂಥ ಸಂಶೋಧನೆಗಳಿಗೆ ಎಡೆಮಾಡಿವೆ; ಅವೆಲ್ಲ ಸಾಂಸ್ಕೃತಿಕ ಇತಿಹಾಸದ ದಾಖಲೆಗಳಾಗಿವೆ. ನಮ್ಮ ನಡುವಿನ ಅಜ್ಞಾನದ ಗೋಡೆಗಳನ್ನು ಕೆಡವಲು ಇವೂ ಬೇಕಲ್ಲವೆ? ಥರ್ಸ್ಟನ್ ಮೊದಲಾದವರು ಜಾತೀಯತೆಯನ್ನು ಬಿತ್ತಿದರೆ? ನಮ್ಮನ್ನು ಈಗ ಜಾತಿಯೂ ಆಳುತ್ತಿಲ್ಲ, ಸಂಸ್ಕೃತಿಯೂ ಆಳುತ್ತಿಲ್ಲ; ವಿಜ್ಞಾನ ಆಳುತ್ತಿದೆ. ನಾವು ಇಷ್ಟಪಡಲಿ, ಬಿಡಲಿ, ಅದನ್ನು ಒಪ್ಪಲಿ ಬಿಡಲಿ ಜಗತ್ತಿನ ಎಲ್ಲರದೂ ವಿಜ್ಞಾನದ ಜಾತಿಯಾಗಿದೆ.

ಎಂಥ ಪರಮವೈದಿಕರ ಮನೆಯೂ ಈಗ ಗುಡಿಸಲಲ್ಲ. ನಾಡ ಹಂಚು ಬಂತು, 'ಮಂಗಳೂರು ಹಂಚು' ಬಂತು, ತಾರಸಿ ಬಂತು. ನೆಲವನ್ನು ಗೋಮಯಹಾಕಿ ಸಾರಿಸಿ ಹೆಣ್ಣುಮಕ್ಕಳು ಕೈನೋಯಿಸಿಕೊಳ್ಳುತ್ತಿದ್ದ ಜಾಗದಲ್ಲಿ ಸಿಮೆಂಟ್‌ನೆಲ ಬಂದಿದೆ, ಮೊಸಾಯಿಕ್ ಬಂದಿದೆ. ಬೀಸುವಕಲ್ಲು ಒರಳುಕಲ್ಲು ಹೋಗಿ ಮಿಕ್ಸಿ, ಗ್ರೈಂಡರ್‌ಗಳು ಬಂದಿವೆ. ವಿದ್ಯುನ್ಮಾನ ಮಾಧ್ಯಮಗಳು ಆವರಿಸಿವೆ. ಹೊಸತಾಗಿ ಬಂದ ಎಲ್ಲವೂ ಎಲ್ಲ ಜನರ ಮನೆಗಳನ್ನು ಪ್ರವೇಶಿಸಿ ಪರಿಣಾಮಿಸಿ ಆಳುತ್ತಿವೆ. ಜಾತಿವಿಶೇಷಗಳು ಗೌಣವಾಗುತ್ತ, ದೂರವಾಗುತ್ತ ಸಾಗಿವೆ. ನಮ್ಮ ನಿಜವಾದ ಓಟ ಜಾತ್ಯತೀತತೆಯ ಕಡೆಗೇ ಇದೆ, ವೈಜ್ಞಾನಿಕ ಮನೋಭಾವದ ದಿನಚರಿಯ ಕಡೆಗೆ ಇದೆ.

**10. ನೀವು ಈ ಕೆಲಸವನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದೀರಿ?**

ಅದು ಸಂಶೋಧಕನ ಲಕ್ಷಣ !

ಥಾಮಸ್ ಆಲ್ವ ಎಡಿಸನ್ ವಿದ್ಯುದ್ದೀಪವನ್ನು ಪತ್ತೆಮಾಡಲು ಹೊರಟ. ದೀಪವನ್ನು ಉರಿಸುವವರೆಗೂ ಸಂಶೋಧನೆಯನ್ನು ಮುಂದುವರಿಸಿದ. ನಚಿಕೇತನ ದಾರಿ ಅದು.

ತನ್ನನ್ನು ತಾನು ಅರಿಯುವ ದಾಹ ಎಂಥದು ಎಂಬುದನ್ನು ನೋಡಲು ಅಲೆಕ್ಸ್ ಹ್ಯಾಲಿಯ (Alex Haley) Roots ಓದಬೇಕು. ಸಂಶೋಧಕನ ಓಟ ಎಂಥದು ಎಂದು ಕಾಣಲು Simone de Beauvoir ಅವರ The Second Sex ಓದಬೇಕು. ಒಂದು ಕಡೆ ಆಳವಾಗಿ ಅಗೆದರೆ ತಾನೆ ಬಾವಿಯಲ್ಲಿ ನೀರು ಬರುವುದು !

**11. ತಮ್ಮ ತಮ್ಮ ಸಂಸ್ಕೃತಿಯ ಬಗೆಗೇ ಅಧ್ಯಯನ ಮಾಡುವುದು ಪಕ್ಷಪಾತದಿಂದ ಕೂಡಿರಬಹುದಲ್ಲವೆ?**

'ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ' ಎನ್ನುತ್ತಾರೆ ಆಚಾರ್ಯರು. ಸತ್ಯವನ್ನು ಕಂಡುಹಿಡಿದು ಸತ್ಯವನ್ನೇ ಪ್ರತಿಪಾದಿಸುವಾಗ ದೊರೆಯುವ ಆತ್ಮತೃಪ್ತಿಯೇ ಈ ಕಠಿಣಕಾರ್ಯಕ್ಕಿರುವ ಫಲ. ಸಮುದಾಯವೇ ಅದನ್ನು ಒರೆಗೆ ಹಚ್ಚುತ್ತದೆ – ಇಂದಲ್ಲ ನಾಳೆ, ಇವರಲ್ಲದಿದ್ದರೆ ಅವರು.

ಎಷ್ಟೇ ಶ್ರಮಿಸಿದರೂ ಅನ್ಯಸಂಸ್ಕೃತಿಯನ್ನು ದಕ್ಕಿಸಿಕೊಂಡು ಸಮಗ್ರವಾಗಿ ಮತ್ತು ನಿರ್ದುಷ್ಟವಾಗಿ ಪ್ರತಿಪಾದಿಸುವುದು ಕಷ್ಟ. ತಾನೇ ಬೆಳೆದು ಓಡಾಡಿದ ಸಂಸ್ಕೃತಿಯ ಅಂತರಂಗ ಮತ್ತು ಬಹಿರಂಗ ದರ್ಶನವು ಅನ್ಯಸಂಸ್ಕೃತಿಯ ಅಧ್ಯಯನಕ್ಕಿಂತ ನಿಷ್ಕೃಷ್ಟವಾಗಿ ಆಗುವುದು ಸಾಧ್ಯ.

ಅಪೂರ್ಣವೂ ದೋಷಪೂರ್ಣವೂ ಆದ ಒಂದು ಸಂಶೋಧನೆಯು ಅದನ್ನು ಸರಿಪಡಿಸಲು ಮತ್ತೊಂದು ಸಂಶೋಧನೆಗೆ ದಾರಿ ಮಾಡುತ್ತದೆ.

12. **ನೀವು ಈಗ ಹೊರತಂದಿರುವ ಹತ್ತು ಮಹಾಸಂಪುಟಗಳಲ್ಲಿ ಐದು ಗಂಭೀರವಾದ ಸಂಶೋಧನಕೃತಿಗಳೆಂಬುದು ನಿರ್ವಿವಾದ. ಆದರೆ ಉಳಿದ ಐದು ಆತ್ಮಕಥೆಗಳು ಮತ್ತು ಜೀವನ ಚಿತ್ರಗಳು. ಏಳನೆಯ ಸಂಪುಟವಂತೂ ಒಂದು ಸಣ್ಣ ವ್ಯಕ್ತಿಚಿತ್ರದೊಂದಿಗೆ ಅವರ ಲೇಖನಗಳ ಸಂಗ್ರಹವನ್ನು ಕೊಟ್ಟಿರುವಂಥದು. ಇದರ ಬದಲು ಸಂಶೋಧನ ಕೃತಿಗಳನ್ನೇ ತಂದಿದ್ದರೆ ಈ ಮಾಲೆಯು ಹೆಚ್ಚು ಅರ್ಥಪೂರ್ಣವಾಗುತ್ತಿತ್ತಲ್ಲವೆ?**

ಈ ಮಾಲೆಯನ್ನು ತರುವಾಗ ಸಂಶೋಧನೆ, ವಿಷಯದ ಕ್ರೋಡೀಕರಣ ಮತ್ತು ಪ್ರಕಟಣೆ ಎಂಬ ಮೂರು ಉದ್ದೇಶಗಳನ್ನಿಟ್ಟುಕೊಳ್ಳಲಾಯಿತು. ಸಂಕೇತಿ ಸಮುದಾಯವು ಅನೂಚಾನವಾಗಿ ವೇದೋಪನಿಷತ್ತುಗಳು ಪುರಾಣಗಳು ಇತಿಹಾಸ ಮಹಾಕಾವ್ಯಗಳು; ಸಂಸ್ಕೃತಭಾಷೆ ಮತ್ತು ಸಾಹಿತ್ಯ; ಪೌರೋಹಿತ್ಯ, ಸಂಪ್ರದಾಯಾಚಾರ; ಶಾಸ್ತ್ರೀಯ ಸಂಗೀತ, ಗಮಕ, ಸಂಪ್ರದಾಯದ ಹಾಡುಗಳು; ಅಡಕೆ ತೋಟದ ವ್ಯವಸಾಯ ಇವುಗಳಲ್ಲಿ ಪರಿಣತಿಯನ್ನು ಸಾಧಿಸಿಕೊಂಡು ಬಂತು. ಸಮಾಜದ ಪ್ರತಿಯೊಬ್ಬರೂ 'ಲೌಕಿಕ'ವೆನ್ನುವ ಪ್ರಪಂಚದ ಕಡೆಗೆ ಉದಾಸೀನದಿಂದಲೇ ಇರುವ ಪ್ರವೃತ್ತಿಯವರಾದರು. ಹಾಗಾಗಿ ತಮ್ಮ ಬದುಕಿನ ಬಗೆಗೆ ಏನನ್ನೂ ದಾಖಲಿಸಲಿಲ್ಲ. ಇಪ್ಪತ್ತನೆಯ ಶತಮಾನದ ಆದಿಭಾಗದ ಹೊತ್ತಿಗೆ ಆಧುನಿಕ ಶಿಕ್ಷಣದಲ್ಲಿ ತಮ್ಮನ್ನು ಸಣ್ಣದಾಗಿ ತೊಡಗಿಸಿಕೊಂಡು, ಮಧ್ಯಭಾಗದ ಹೊತ್ತಿಗೆ ವ್ಯಾಪ್ತಿಯನ್ನು ಪಡೆದು, ನಾಲ್ಕನೆಯ ಪಾದದಲ್ಲಿ ಎಲ್ಲರೂ ಅದನ್ನು ತೀವ್ರವಾಗಿ ಅಪ್ಪಿ ಹೊಸ ಉದ್ಯೋಗಗಳನ್ನಾಶ್ರಯಿಸಿ ಹೊಸ ಪ್ರಪಂಚಕ್ಕೆ ಕಾಲಿಟ್ಟರು. ಆಗಲೂ ಮಾನವಿಕಗಳ ಕಡೆಗೆ ಬಂದವರು ಬಹು ಕಡಮೆ; ಸಮುದಾಯದ ವಿಷಯವನ್ನಾಗಲಿ ವ್ಯಕ್ತಿವಿಷಯವನ್ನಾಗಲಿ ದಾಖಲಿಸಿದ್ದು ಇನ್ನೂ ಕಡಮೆ. ಈ ಕಾರಣದಿಂದಲೇ ಇಂಥದೊಂದು ಪ್ರವೃತ್ತಿಗೆ ಪ್ರಚೋದನೆ ನೀಡಿ, ಜನರನ್ನು ಆ ಕಾರ್ಯದಲ್ಲಿ ತೊಡಗಿಸಬೇಕಾಯಿತು. ಅದು ಬಹು ಪ್ರಯಾಸದ ಕೆಲಸವೂ ಆಯಿತು. ಕೆಲವರ ಲೇಖನವನ್ನಂತೂ ಪುನರ್ಲೇಖಿಸಬೇಕಾಯಿತು. ಈ ಕಾರಣದಿಂದಲೇ ಯಾವುದು ಪ್ರಾಥಮಿಕ ಅವಸ್ಥೆಯ ಕೆಲಸವೆಂದು ಕಾಣುತ್ತದೋ ಅದನ್ನು ಕೂಡ ಪ್ರಯಾಸದಿಂದ ಮೊದಲಬಾರಿಗೆ ಸಾಧಿಸಲಾಗಿದೆ. ಅಂಥ ಸಾಮಗ್ರಿಯು ತನ್ನಷ್ಟಕ್ಕೇ ಒಂದು ಸಾಂಸ್ಕೃತಿಕ ದಾಖಲೆಯಾಗಿದೆ; ಸಂಶೋಧನೆಗೆ ಆಧಾರವಾಗಿದೆ; ಹಾಗಾಗಿ ಅವನ್ನು ಕ್ರೋಡೀಕರಿಸಿ ಸಂಪುಟಗಳ ರೂಪದಲ್ಲಿ ತರಲಾಗಿದೆ.

ಇಂಥ ಸಾಮಗ್ರಿಯು ಪುಷ್ಟವಾಗಿ ದಾಖಲಾಗಿ ಮುಂದೊಂದು ದಿನ ಪ್ರಖರಪಂಡಿತರು ಈ ಕ್ಷೇತ್ರದ ಸಂಶೋಧನೆಯಲ್ಲಿ ತೊಡಗಿಕೊಳ್ಳುವಂತಾದರೆ ಈಗಿನ ಶ್ರಮವು ಸಾರ್ಥಕವಾದಂತೆ.

ಡಾ. ಶಾಮಶಾಸ್ತ್ರಿಗಳ ವ್ಯಕ್ತಿಚಿತ್ರ ಮತ್ತು ಸಂಶೋಧನ ಲೇಖನಗಳು ಬಹು ಪ್ರತಿಷ್ಠಿತವಾದಂಥವು. ಅರ್ಥಶಾಸ್ತ್ರವು ಪ್ರಕಟವಾದ ನೂರನೆಯ ವರ್ಷದ ವಿಶಿಷ್ಟ ಸಂದರ್ಭವನ್ನು ಬಳಸಿಕೊಂಡು ಈ ಮಾಲೆಯ ಏಳನೆಯ ಸಂಪುಟವಾಗಿ ಅದನ್ನು ತರಲಾಗಿದೆ. ಈ ಮಾಲೆಯ ಪುಸ್ತಕಗಳು ತಲುಪಬೇಕಾದ ಉತ್ಕೃಷ್ಟತೆಯ ಪ್ರಾತಿನಿಧಿಕರೂಪ ಅದು.

13. **'ಶತಮಾನದ ಪತ್ರಗಳು' ಎಂಬ ಸಂಪುಟದಲ್ಲಿ ಪ್ರೊ. ಶ್ರೀಕಂಠಕುಮಾರಸ್ವಾಮಿ ಅವರು ಬರೆದ ಪತ್ರಗಳನ್ನು ಸೇರಿಸಿದ್ದೀರಿ. ಮೊದಲಭಾಗದಲ್ಲಿ ಕೌಟುಂಬಿಕ ಪತ್ರಗಳು ಬಂದಿದ್ದು ಅದು ಸಂಕೇತಿ ಸಮುದಾಯದ ಸಾಂಸ್ಕೃತಿಕ ಇತಿಹಾಸಕ್ಕೆ ನೆರವಾಗಿದೆ. ಪ್ರೊ. ಶ್ರೀಕಂಠಕುಮಾರಸ್ವಾಮಿಯವರ ಪತ್ರಗಳು ಕ್ರಾಂತಿಕಾರಿಯಾಗಿದ್ದು ಈ ಸಮುದಾಯದ ಸಾರ್ವತ್ರಿಕ ಚಿಂತನೆಗಿಂತ ಭಿನ್ನವಾಗಿವೆ. ಇವೆರಡನ್ನೂ ಒಂದೇ ಸಂಪುಟದಲ್ಲಿ ತಂದದ್ದು ಎಷ್ಟರಮಟ್ಟಿಗೆ ಸರಿ?**

ಈ ಸಂಪುಟದಲ್ಲಿ ಸಂಕೇತಿ ಸಮುದಾಯವು ಪತ್ರ ಬರೆಯಲು ಸುಮಾರಾಗಿ ಪ್ರಾರಂಭಿಸಿದ ದಿನದಿಂದ ತೊಡಗಿ ಬಹುತೇಕ ನಿಲ್ಲಿಸಿದ ದಿನದವರೆಗಿನ ಪತ್ರಗಳು ಸೇರಿವೆ ಎಂದು ಸ್ಥೂಲವಾಗಿ ಹೇಳಬಹುದು. ಮೊದಲನೆಯ ಭಾಗದಲ್ಲಿ ಅನೇಕ ದಶಕಗಳಲ್ಲಿ ನೂರಾರು ಜನ ಬರೆದ ನೂರಾರು ಕೌಟುಂಬಿಕ ಮತ್ತು ಸಾಮಾಜಿಕ ವಿಷಯಗಳು ಸೇರಿವೆ. ಎರಡನೆಯ ಭಾಗದಲ್ಲಿ

ಒಂದೆರಡು ದಶಕಗಳ ಅವಧಿಯಲ್ಲಿ ಒಬ್ಬನೇ ವ್ಯಕ್ತಿಯು ಸಾಮಾನ್ಯವಾಗಿ ವೈದಿಕ ಜೀವನವನ್ನೇ ಕುರಿತು ಬರೆದ ಹತ್ತಾರು ಪತ್ರಗಳು ಸೇರಿವೆ. ಮೊದಲನೆಯ ಭಾಗವು ಸಾಂಪ್ರದಾಯಿಕ ಜೀವನದ ಒಳವಿವರಗಳನ್ನು ಕೊಡುತ್ತದೆ. ಎರಡನೆಯ ಭಾಗದ ಪತ್ರಕಾರರು ಆಧುನಿಕ ಶಿಕ್ಷಣವನ್ನೂ ಪಡೆದ ವೈದಿಕರು. ಅವರದು ವೈಜ್ಞಾನಿಕ ಮನೋಭಾವದ ಕಡೆಗಿನ ಒಲವು. ಹೊಸ ಶಿಕ್ಷಣ ಮತ್ತು ಹೊಸ ಚಿಂತನಕ್ರಮದ ಪ್ರತಿನಿಧಿ ಅವರು; ಅದನ್ನು ಹೀಗೆ ದಾಖಲಿಸಿದ ಮೊದಲಿಗರು. ವೈದಿಕ ತತ್ತ್ವಗಳ ಮೂಲಸತ್ತ್ವದ ಬಗೆಗೆ ಅವರ ತಕರಾರಿಲ್ಲ. ಮೂಲಸತ್ತ್ವಕ್ಕೆ ಧಕ್ಕೆಯಾಗದಂತೆ ಮಾಡುವ ಯಾವ ಪರಿಷ್ಕರಣಕ್ಕೂ ಈಗಿನ ಸಾರ್ವತ್ರಿಕ ಸಮಾಜದ ವಿರೋಧವಿಲ್ಲ. ಹೀಗಾಗಿ ಎರಡೂ ಭಾಗಗಳು ಪರಸ್ಪರ ವಿರುದ್ಧವಲ್ಲ, ಪರಸ್ಪರ ಪೂರಕ; ಚಲನಶೀಲವಾದ ಸಮಾಜವೇ ಇಲ್ಲಿ ಪ್ರತಿಫಲಿತವಾಗಿದೆ.

**14. ಈ ರೀತಿಯ ಸಂಪುಟಮಾಲೆಗೆ ಮಾದರಿ ಇತ್ತೆ?**

ಸಮುದಾಯ ಅಧ್ಯಯನ ಕೇಂದ್ರದಿಂದ ಅದಾಗಲೇ 25 ಕಿರುಹೊತ್ತಗೆಗಳನ್ನು ತರಲಾಗಿತ್ತು. ಅವುಗಳಲ್ಲಿ ಸಂಕೇತಿ ಸಮುದಾಯವನ್ನು ಕುರಿತ ಹೊತ್ತಗೆಗಳೂ ಸೇರಿದ್ದವು. ಸಮುದಾಯ ಅಧ್ಯಯನಕೇಂದ್ರದಲ್ಲಿ ಸಂಕೇತಿ ಸಮುದಾಯಕ್ಕೆ ಸಂಬಂಧಿಸಿದ ಮಾಹಿತಿಯು ಹೆಚ್ಚಾಗಿಯೇ ಸಂಗ್ರಹವಾಗಿತ್ತು. ಅದನ್ನೆಲ್ಲ ವಿಷಯಾನುಗುಣವಾಗಿ ವಿಂಗಡಿಸಿ ಮಹಾಸಂಪುಟಗಳ ರೂಪದಲ್ಲಿ ಪ್ರಕಟಿಸಲು ನಿಶ್ಚಯಿಸಲಾಯಿತು.

ಥರ್ಸ್ಟನ್ ಮೊದಲಾದವರ ಜನಾಂಗ ಅಧ್ಯಯನದ ಸಂಪುಟಸರಣಿಗಳನ್ನು ಕಂಡಿದ್ದೆ. ಯಹೂದೀ ಸಮುದಾಯದ ಬಗೆಗಿನ ಸಂಪುಟಸರಣಿಯನ್ನೂ ನೋಡಿದೆ. ಅವೆಲ್ಲವೂ ನನ್ನ ಸುಪ್ತಪ್ರಜ್ಞೆಯಲ್ಲಿದ್ದು ಇಂಥದೊಂದು ಸಂಪುಟಸರಣಿಯ ಸ್ವರೂಪವನ್ನು ನಿರ್ದೇಶಿಸಿರಬಹುದು, ಈ ಉಪಕ್ರಮಕ್ಕೆ ಧೈರ್ಯತುಂಬಿರಬಹುದು.

**15. ಈ ಯೋಜನೆಗೆ ಧನಬಲ ಸಿಕ್ಕಿದ್ದು ಹೇಗೆ?**

ಇಂಥ ಕೆಲಸಗಳಿಗೆ ಬಳಲಿಕೆಯೇ ಬಲ. ಕ್ಷೇತ್ರಕಾರ್ಯವನ್ನಾಧರಿಸಿ ಮಾಡಬೇಕಾದ ಕೆಲಸಗಳು ಮಿತಿಯರಿಯದ ಹಣವನ್ನೂ, ಶ್ರಮವನ್ನೂ ಸಮಯವನ್ನೂ ಬೇಡುತ್ತವೆ. ಅವನ್ನು ವಿನಿಯೋಗಿಸಿ ಸಂಪುಟಗಳನ್ನು ಸಿದ್ಧಪಡಿಸಿದೆವು. ಪ್ರಕಟಣೆಗಾಗಿ ಮಾತ್ರ ದಾನಿಗಳಿಂದ ಹಣವನ್ನು ಸಂಗ್ರಹಿಸಿದೆವು. ಅಂಥವರನ್ನು ಸದಸ್ಯರೆಂದು ಕರೆದೆವು. ಪ್ರಕಟಿತ ಗ್ರಂಥಗಳನ್ನು ಅಂಥ ಸದಸ್ಯರಿಗೂ, ವಿದ್ವಾಂಸರಿಗೂ, ಸಂಸ್ಥೆಗಳಿಗೂ ಉಚಿತವಾಗಿ ಹಂಚಿದೆವು; ಮಾರುಕಟ್ಟೆಯ ಕೆಲಸವು ನಮ್ಮ ಮಿತಿಯನ್ನು ಮೀರಿದ್ದರಿಂದಾಗಿ ಆ ಭಾಗವನ್ನು ಕೈಬಿಟ್ಟೆವು. ಇದೆಲ್ಲದರಿಂದಾಗಿ ಪ್ರತಿ ಸಂಪುಟದ 250–300 ಪ್ರತಿಗಳನ್ನು ಮಾತ್ರ ಮುದ್ರಿಸುತ್ತಿದ್ದೆವು.

ಕಿರುಹೊತ್ತಗೆಗಳನ್ನು ತರುತ್ತಿದ್ದಾಗ ಆವರ್ತನ ರೀತಿಯಿಂದ ಪುಸ್ತಕಗಳನ್ನು ಪ್ರಕಟಿಸಬೇಕೆಂದು ಚಿಂತಿಸಿ ಸದಸ್ಯತ್ವಕ್ಕಾಗಿ 25 ರೂಗಳನ್ನು ಸಂಗ್ರಹಿಸಿದೆವು. ಅದು ಸಾರ್ವಜನಿಕ ಹಣವಾದ್ದರಿಂದ ಅದಕ್ಕೊಂದು ವಿಶ್ವಸ್ತಸಮಿತಿಯನ್ನು (Trust) ರೂಪಿಸಿ ನೋಂದಾಯಿಸಿದೆವು. ಕ್ರಮವಾಗಿ ಲೆಕ್ಕಪತ್ರ ಪರಿಶೋಧನೆ ಮಾಡಿಸಿದೆವು. 80G ನಿಯಮದ ಅನ್ವಯ ದಾನಿಗಳಿಗೆ ಆದಾಯ ತೆರಿಗೆ ವಿನಾಯಿತಿ ಸಿಕ್ಕಿತು. ಗಣ್ಯರಾದ ವಿದ್ವಾಂಸರು ಸಮಿತಿಯ ಸದಸ್ಯರಾದರು.

ಮಹಾಸಂಪುಟಗಳ ಯೋಜನೆಯನ್ನು ಪ್ರಾರಂಭಿಸಿದಾಗ ಸದಸ್ಯತ್ವ ಶುಲ್ಕವನ್ನು ಹೆಚ್ಚಿಸಿದೆವು. ಸಂಶೋಧನೆ ಮಾಡಿ ಸಂಪುಟಗಳ ಹಸ್ತಪ್ರತಿಯನ್ನು ಸಿದ್ಧಪಡಿಸುವುದು ಎಷ್ಟು ಪ್ರಯಾಸದ ಕೆಲಸವಾಗಿತ್ತೋ ಅಷ್ಟೇ ಶಕ್ತಿ ಮತ್ತು ಸಮಯವು ನಿಧಿಸಂಗ್ರಹದ ಕೆಲಸಕ್ಕೂ ವ್ಯಯವಾಯಿತು. ವಿಭಿನ್ನ ರೀತಿಯ ಸಮೃದ್ಧವಾದ ಲೋಕಾನುಭವವನ್ನು ಪಡೆಯುತ್ತಾ, ಸಂಕಲ್ಪಿಸಿದಂತೆ ಹತ್ತು ಸಂಪುಟಗಳನ್ನೂ ಪ್ರಕಟಿಸಿದೆವು.

ಈ ಕೆಲಸವು ಯಶಸ್ವಿಯಾಗಿ ಮುಗಿದದ್ದು ಉದಾರಿಗಳಾದ ದಾನಿಗಳಿಂದ, ಹಲವು ರೀತಿಯಲ್ಲಿ ಹಲವು ರೀತಿಯ ನೆರವು ನೀಡಿದ ಮಿತ್ರರಿಂದ, ವಿದ್ವಾಂಸರ ಸಹಯೋಗದಿಂದ. ಅಕ್ಷರಶಃ ನೂರಾರು ಜನರು ಪೂರ್ಣಮನಸ್ಸಿನಿಂದ ತೊಡಗಿಕೊಂಡು ಆಶೀರ್ವದಿಸಿದ್ದರಿಂದ ಮಾತ್ರವೇ ಹತ್ತು ಸಂಪುಟಗಳ ಈ ಯೋಜನೆಯು ಪೂರ್ಣಗೊಂಡಂತಾಗಿದೆ.

**16. ನಿಮ್ಮ ಈ ಯೋಜನೆಯಲ್ಲಿ ಡಾ. ಕೆ. ಅನಂತರಾಮು, ಪ್ರೊ. ಜಿ. ಅಶ್ವತ್ಥನಾರಾಯಣ, ಶ್ರೀ ಎನ್.ಎಸ್. ಶಾರದಾ ಪ್ರಸಾದ್, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಮೊದಲಾದವರು ನಿಮ್ಮ ಜತೆ ನಿರಂತರವಾಗಿ ಇರುವಂತಿದೆ?**

ಧನಬಲವು ಇಂಥ ಯೋಜನೆಗಳಿಗೆ ಅತ್ಯಗತ್ಯ; ಅದು ದೇಹವಿದ್ದಂತೆ. ವಿದ್ವಾಂಸರ ಆಶೀರ್ವಾದವಿಲ್ಲದಿದ್ದರೆ ಗ್ರಂಥವೇ ಸಿದ್ಧವಾಗುವುದಿಲ್ಲ; ಅದು ಜೀವವಿದ್ದಂತೆ.

ಪುನರ್ಜನ್ಮ, ಋಣಾನುಬಂಧ, ಪೂರ್ವನಿಶ್ಚಿತ ಜೀವನ ಇಂಥ ಸಿದ್ಧಾಂತಗಳನ್ನು ನಂಬುವುದು ಅವುಗಳ ವಿಶಿಷ್ಟಸ್ವರೂಪದಿಂದಾಗಿಯೇ ಕಷ್ಟ. ಆದರೆ ಈ ಯೋಜನೆಗೆ ನೆರವಾದವರು ಮತ್ತು ಆ ನೆರವಿನ ಸ್ವರೂಪ, ರೀತಿ, ಪ್ರಮಾಣ ಇವುಗಳನ್ನು ನೋಡಿದಾಗ 'ನನ್ನ ಮಟ್ಟಿಗೆ ಆ ಸಿದ್ಧಾಂತಗಳು ಪೂರ್ಣಸತ್ಯ' ಎಂದು ಖಚಿತವಾಗಿ ಎನಿಸುತ್ತದೆ.

ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳಂಥ ಪರಮಪಂಡಿತರ ಮನೆಗಾಗಲಿ, ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಗೆ ಭೂಷಣಪ್ರಾಯರಾದ ವಿದ್ವಾನ್ ಘಾಟಕ್, ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ, ವಿದ್ವಾನ್ ಡಾ. ಎಚ್.ವಿ. ನಾಗರಾಜರಾವ್ ಅವರಂಥವರ ಬಳಿಗಾಗಲಿ ಸುಳಿಯುವ ಅವಕಾಶ ಸಿಗುವುದು ಋಣಾನುಬಂಧದಿಂದ ಮಾತ್ರ. ಅವರೆಲ್ಲರೂ ನನಗಾಗಿ ಸಮಯವನ್ನು ವಿನಿಯೋಗಿಸಿದ್ದಾರೆ. ಈ ಸಂಪುಟಗಳಿಗೆ ಘನತೆಯನ್ನು ತರಲು ತಮ್ಮವೇ ಆದ ಬೃಹತ್ ಯೋಜನೆಗಳ ನಡುವೆ ಶ್ರಮಿಸಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆಗೆ ಸೇರಿದ ತತ್‌ಕ್ಷಣ ಪ್ರೊ. ಜಿ. ಅಶ್ವತ್ಥನಾರಾಯಣ ಅವರಂಥ 'ಅಣ್ಣ'ನ ಸಹವಾಸ ದೊರೆಯದಿದ್ದರೆ ನಾನು ನಡೆದ ದಿಕ್ಕಿನ ಕಥೆ ಏನಾಗುತ್ತಿತ್ತೋ? ಹೆಜ್ಜೆ ಹೆಜ್ಜೆಗೆ ದಾರಿ ತೋರಿ ಮುಸುಕಿದ ಕತ್ತಲಲ್ಲಿ ಕೈ ಹಿಡಿದು ನಡೆಸಿದ ಕರುಣಾಳುಬೆಳಕು ಅವರಾಗಿದ್ದಾರೆ. ಸಂಪುಟಗಳ ಕರಡು ಪ್ರತಿಗಳಿಗೆ ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರ ಅಮೃತಸ್ಪರ್ಶವಾದ ಹೊರತು, ಸಂಪುಟದ ಸತ್ತ್ವದ ಬಗೆಗೆ ಅವರು ಧೈರ್ಯ ತುಂಬಿ ಹಸಿರು ನಿಶಾನೆ ತೋರಿದ ಹೊರತು ಯಾವ ಸಂಪುಟವೂ ಹೊರಗೆ ಬಂದಿಲ್ಲ. ಅವರ ಸಕಾರಾತ್ಮಕ ಲಹರಿಯೇ ಒಂದು ಶಕ್ತಿ.

ಸಣ್ಣ ಲೇಖನದಿಂದ ತೊಡಗಿ ಬೃಹತ್ ಸಂಪುಟದವರೆಗೆ ಯಾವುದೇ ಆಗಲಿ ಅದನ್ನು ಪೂರ್ಣಮನಸ್ಸಿನಿಂದ ಸಮಾಧಾನವಾಗಿ ಅವಲೋಕಿಸಿ ಪರಿಣತ ಮಾರ್ಗದರ್ಶನ ಮಾಡಿ ವಿಸ್ತಾರವಾದ ವಿಶ್ಲೇಷಣೆಗಳನ್ನು ಬರೆದುಕೊಟ್ಟು ನಿರಂತರವಾಗಿ ಆಶೀರ್ವದಿಸುತ್ತಿರುವ ಡಾ. ಕೆ. ಅನಂತರಾಮು ಅವರು ಸಂಕೇತಿ ಸಮುದಾಯವನ್ನು ನಿಕಟವಾಗಿ ದೀರ್ಘಕಾಲ ಕಂಡವರು, ಅದರಲ್ಲಿ ಒಡನಾಡಿದವರು. ಅದೊಂದು ಅಪೂರ್ವ ಸಂಯೋಜನೆ. ಈ ಸಂಪುಟಸರಣಿಗೊಂದು ಬಲವಾದ ಅಚ್ಚುಕಟ್ಟು ಬಂದುದು ಅವರಿಂದ.

ಹತಾಶಸ್ಥಿತಿಗಳಲ್ಲಿ ಗೀತೋಪದೇಶ ಮಾಡಿ ಯೋಜನೆಯನ್ನು ಮುಂದುವರಿಸಲು ಪ್ರೇರಿಸಿದ್ದು ಪೂಜ್ಯರಾದ ಡಾ. ಮತ್ತೂರು ಕೃಷ್ಣಮೂರ್ತಿ ಮೊದಲಾದ ಈ ಎಲ್ಲ ಪೂಜ್ಯರೇ. ಸಂಪುಟಗಳಿಗೆ ಮುನ್ನುಡಿ ಬರೆದುಕೊಟ್ಟ ವಿದ್ವಾಂಸರು, ಸಂಪುಟಗಳನ್ನು ಸಂಪಾದಿಸಿಕೊಟ್ಟು ಸಿದ್ಧಪಡಿಸಿಕೊಟ್ಟು ಉಪಕರಿಸಿದ ಶ್ರದ್ಧಾವಂತರು, ಈ ಸಂಪುಟಗಳನ್ನು ಕುರಿತು ವಿದ್ವತ್ಪೂರ್ಣ ವಿಮರ್ಶೆಗಳನ್ನು ಬರೆದುಕೊಟ್ಟ ಸಹೃದಯರು, ಸಂಪುಟಗಳಿಗಾಗಿಯೇ ಲೇಖನ ಬರೆದುಕೊಟ್ಟ ನೂರಾರು

ಲೇಖಕರು, ಮಾಹಿತಿ ಒದಗಿಸಿದ ಅಕ್ಷರಶಃ ಸಹಸ್ರಾರು ವಕ್ತೃಗಳು, ತಮ್ಮ ಪರಿಣತ ಸಲಹೆಗಳನ್ನು ಆಗಾಗ ನೀಡಿದ ಪ್ರೊ. ಎ.ವಿ. ನರಸಿಂಹಮೂರ್ತಿ, ವಿದ್ವಾನ್ ಡಾ. ನಾಗಸಂಪಿಗೆ, ಡಾ. ಎಂ.ಎಲ್. ಲಲಿತಮ್ಮ ಮೊದಲಾದ ಪರಿಣತರು ಇವರು ಯಾರನ್ನೂ ಮರೆಯುವಂತಿಲ್ಲ.

ಸಮುದಾಯ ಅಧ್ಯಯನ ಕೇಂದ್ರದ ಅಧ್ಯಕ್ಷರೂ ಷಟ್ಪದೀಕಾವ್ಯಕರ್ತೃವೂ ಆದ ರುದ್ರಪಟ್ಣ ವಿ. ಶ್ರೀನಿವಾಸಯ್ಯನವರು ಮೊದಲ ಕಟ್ಟಿನ 25 ಪುಸ್ತಕಗಳು ಹಾಗೂ ಎರಡನೆಯ ಕಟ್ಟಿನ ಹತ್ತು ಮಹಾಸಂಪುಟಗಳು ಸಿದ್ಧವಾಗುವವರೆಗೂ ಇದ್ದು ಅಷ್ಟನ್ನೂ ಒಂದು ಅಕ್ಷರವೂ ಬಿಡದಂತೆ ಓದಿ ಕೆಲದಿನಗಳಲ್ಲಿ ತಮ್ಮ ನೂರೊಂದನೆಯ ವಯಸ್ಸಿನಲ್ಲಿ ದೈವಾಧೀನರಾದರು. ಅದೂ ಒಂದು ವಿಸ್ಮಯ.

ಸಂಸ್ಥೆಯ ಎಲ್ಲ ಸದಸ್ಯರ ಸತತ ಸಹಕಾರದ ಜತೆಗೆ ನನ್ನ ಪತ್ನಿ ಡಾ. ಎಂ.ಎಸ್. ವಿಜಯಾ ಹರನ್ ಕೂಡ ಬೌದ್ಧಿಕ ಸಹಕಾರವನ್ನೂ ನೀಡಿದ್ದಾರೆ. ಸಂಕೇತಿ ಅಧ್ಯಯನಕ್ಕೆ ನಾನು ತೊಡಗಿದ್ದು ಅಧ್ಯಾಪಕನಾದ ತರುಣದಲ್ಲಿ 1983ರಲ್ಲಿ. ಹತ್ತು ಮಹಾಸಂಪುಟಗಳ ಕೆಲಸ ಮುಗಿದದ್ದು 2010ರಲ್ಲಿ – ನನ್ನ ಸೇವಾ ನಿವೃತ್ತಿಯಾದ ಮೇಲೆ. ಇಷ್ಟು ದೀರ್ಘಕಾಲ ನಿರಂತರವಾಗಿ ನನ್ನ ಸಂಬಳದ ಪೂರ್ತಹಣವು ಸಂಕೇತಿ ಅಧ್ಯಯನಕ್ಕೆ ವಿನಿಯೋಗವಾಗಲು ಅವಕಾಶ ಮಾಡಿಕೊಟ್ಟವರು ನನ್ನ ಪತ್ನಿ. ಇದೊಂದು ಸುಯೋಗ.

**17. ಈ ಹತ್ತೂ ಸಂಪುಟಗಳ ರೂಪರೇಖೆಯನ್ನು ಮೊದಲೇ ನಿಗದಿಪಡಿಸಿಕೊಂಡು ಪ್ರಾರಂಭಮಾಡಲಾಯಿತೆ?**

ಮೊದಲು 20 ಸಂಪುಟಗಳ ಕಲ್ಪನೆ ಮಾಡಿಕೊಂಡು ಪ್ರಾರಂಭಿಸಲಾಯಿತು. ಮೊದಲೆರಡು ಸಂಪುಟಗಳೂ ನಾಲ್ಕನೆಯ ಸಂಪುಟವೂ ಎಂಟು, ಒಂಬತ್ತನೇ ಸಂಪುಟಗಳೂ ನಾವೆಣಿಸಿದಂತೆಯೇ ಬಂದವು. ಉಳಿದಂತೆ ಯಾವ ಸಂಪುಟದ ಸಿದ್ಧತೆಯು ಬೇಗ ಮತ್ತು ಸಮಸ್ಯೆಗಳಿಲ್ಲದೆ ಮುಗಿಯಿತೋ ಅಂಥ ಸಂಪುಟಗಳು ಪ್ರಕಟವಾದವು. ಕ್ಷೇತ್ರಕಾರ್ಯವನ್ನೇ ಆಧರಿಸಿ ಮಾಡುವ ಸಂಶೋಧನೆಗಳಿಗೆ ಹೆಚ್ಚಿನ ಹಣ ಮತ್ತು ಸಮಯ ಬೇಕಾಗುತ್ತದೆ. ಆ ಮಿತಿಯು ನಮಗೂ ಇತ್ತು. ಆದರೂ ಈಗ ಪ್ರಕಟವಾಗಿರುವ ಸಂಪುಟಗಳ ಗುಣಾತ್ಮಕತೆಯಲ್ಲಿ ಎಲ್ಲಿಯೂ ರಾಜಿ ಮಾಡಿಕೊಂಡಿಲ್ಲ. ಯಾವ ಕ್ಷೇತ್ರಗಳ ಅಧ್ಯಯನವು ತುರ್ತಿನದೋ ಅವನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಂಡೆವು. ಉದಾಹರಣೆಗೆ ಕೃಷಿ. ನಗರೀಕರಣ ಮತ್ತು ಆಧುನಿಕತೆಯ ಮೇಲುಗೈ ಆದಂತೆ ಸಾಂಪ್ರದಾಯಿಕ ಕೃಷಿವಿಧಾನಗಳು ಬದಲಾಗುತ್ತಿವೆ. ಕೃಷಿಯೇ ಬಿಟ್ಟು ಹೋಗುತ್ತಿದೆ. ಹಳ್ಳಿಗಳು ಖಾಲಿಯಾಗುತ್ತಿವೆ. ಭಾಷೆ, ಸಂಗೀತ, ವೈದಿಕತೆ ಈ ಕ್ಷೇತ್ರಗಳಲ್ಲಿ ಇನ್ನೂ ಬಹಳಷ್ಟು ಕೆಲಸ ಆಗಬೇಕಾಗಿದೆ. ಅವುಗಳಲ್ಲಿಯೂ ಭಾಷೆಯ ಬಗೆಗಿನ ಹೆಚ್ಚಿನ ಸಂಶೋಧನೆಯು ಹೆಚ್ಚು ತುರ್ತಾಗಿ ಆಗಬೇಕಾಗಿದೆ. ಮುಂಬರುವ ಸಂಪುಟಗಳಲ್ಲಿ ಅದಕ್ಕೆ ಆದ್ಯತೆ ನೀಡುವ ಉದ್ದೇಶವಿದೆ.

**18. ಹತ್ತನೆಯ ಸಂಪುಟವನ್ನು ಇಂಗ್ಲಿಷ್ ಭಾಷೆಯಲ್ಲಿ ತಂದಿದ್ದೀರಿ. ಅಲ್ಲದೆ ಅದು ಆರನೆಯ ಸಂಪುಟದ ಪುನರಾವರ್ತನೆಯಾಗಿರುತ್ತದೆ.**

ಸಂಕೇತಿ ಅಧ್ಯಯನಮಾಲೆಯ ಎಲ್ಲ ಸಂಪುಟಗಳನ್ನೂ ಇಂಗ್ಲಿಷ್ ಭಾಷೆಯಲ್ಲಿ ತರಬೇಕೆಂಬ ಉದ್ದೇಶವಿದೆ. ಆದರೆ ಮೊದಲು ಕನ್ನಡ ಭಾಷೆಯಲ್ಲಿ ಈ ಸರಣಿಯು ಮುಗಿಯುವವರೆಗೆ ಅಂಥ ಉಪಕ್ರಮಕ್ಕೆ ಸಮುದಾಯ ಅಧ್ಯಯನ ಕೇಂದ್ರದ ಒಲವಿಲ್ಲ. ಆರನೆಯ ಸಂಪುಟದಲ್ಲಿ ಸೇರಿರುವ ಆತ್ಮಕಥೆಗಳ ಪೈಕಿ ಶೇ. 70 ಭಾಗವು ನಮಗೆ ಮೂಲ ಇಂಗ್ಲಿಷ್‌ನಲ್ಲಿ ದೊರಕಿತ್ತು. ಆ ಪೈಕಿ ದೊಡ್ಡ ಭಾಗವನ್ನು ಕನ್ನಡದಿಂದ ಇಂಗ್ಲಿಷ್‌ಗೆ ತಂದಿದ್ದವರು ಶ್ರೀ ಸುಂದರರಾಜ್ ಅವರು. ಉಳಿದ ಶೇ. 30 ಭಾಗವನ್ನೂ ಇಂಗ್ಲಿಷಿಗೆ ತರಲು ಅವರು ದಯಮಾಡಿ ಒಪ್ಪಿ ಬೇಗ

ನಿರ್ವಹಿಸಿಕೊಟ್ಟರು. ಅದನ್ನು ಪ್ರಕಟಿಸಿದೆವು. ಒಳ್ಳೆಯ ಕೆಲಸಕ್ಕೆ ಒದಗಿಬಂದ ಸನ್ನಿವೇಶವನ್ನು ನಿರಾಕರಿಸುವಂತಿರಲಿಲ್ಲ.

**19. ಈ ಯೋಜನೆಯಲ್ಲಿ ತೊಡಗಿಕೊಂಡುದರಿಂದಾಗಿ ನಿಮ್ಮ ಅಧ್ಯಾಪನಕಾರ್ಯವು ಕುಂಠಿತವಾಗಲಿಲ್ಲವೆ?**

ಸಂಶೋಧನೆಯೂ ಲೇಖನಕಾರ್ಯವೂ ಅಧ್ಯಾಪಕನ ಲಕ್ಷಣಗಳು. ಅಧ್ಯಾಪನವು ಯಶಸ್ವಿಯಾಗಲು ಅವು ಪೂರಕಗಳೇ ಹೊರತು ತೊಡಕುಗಳಲ್ಲ. ಸಂಶೋಧನೆ, ಲೇಖನಕಾರ್ಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವವರ ಅಧ್ಯಾಪನದಲ್ಲಿ ಮಾಹಿತಿ ಮತ್ತು ಅದಕ್ಕಿಂತ ಹೆಚ್ಚಾಗಿ ಹೊಳಹುಗಳು ತುಂಬಿರುತ್ತವೆ. ಯಾವ ಕ್ಷೇತ್ರದ ಪರಿಣತಿಯಾದರೂ ಸರಿ, ಅದು ಅಧ್ಯಾಪಕನಿಗೊಂದು ವರ. ಇಷ್ಟರ ನಡುವೆ ಈ ಹತ್ತು ಮಹಾಸಂಪುಟಗಳ ಕೆಲಸದಲ್ಲಿ ವಿಳಂಬವಾದುದಕ್ಕೆ ಅಧ್ಯಾಪನದ ಮೂಲಕರ್ತವ್ಯಗಳ ನಿರ್ವಹಣೆಯಲ್ಲೂ ಇತರ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲೂ ಇದ್ದ ತಲ್ಲೀನತೆಯೂ ಕಾರಣ. ಇಂಥ ಶೈಕ್ಷಣಿಕ ಯೋಜನೆಗಳನ್ನು ಸಾಮಾನ್ಯವಾಗಿ ಬಹುತೇಕ ಅಧ್ಯಾಪಕರು ಹಮ್ಮಿಕೊಂಡಿರುತ್ತಾರೆ.

**20. ಈ ಯೋಜನೆಯ ಹತ್ತು ಮಹಾಸಂಪುಟಗಳ ಕೆಲಸವು ಮುಗಿದಿರುವ ಈ ಹೊತ್ತು ನಿಮ್ಮ ಪಿಎಚ್.ಡಿ. ನಿಬಂಧದಲ್ಲಿ ತಿದ್ದುಪಡಿಗಳನ್ನು ಮಾಡಬೇಕಾದ ಅಗತ್ಯ ಕಾಣುತ್ತಿದೆಯೆ?**

ಇಲ್ಲ. ನನ್ನ ಕ್ಷೇತ್ರಕಾರ್ಯದ ಸ್ವರೂಪವು ಸಂಕೀರ್ಣವೂ ತೀವ್ರವೂ ಆದುದಾಗಿತ್ತು. ಏಳು ವಿಭಿನ್ನ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಹೊಂದಿದ ಸಮುದಾಯವಿದು. ಈಗಿನ ಜನಸಂಖ್ಯೆಯು 30 ಸಾವಿರವಾದರೂ ಅವರು ಚದುರಿರುವುದು ಮೂರು ರಾಜ್ಯಗಳ ಹನ್ನೆರಡು ಜಿಲ್ಲೆಗಳಲ್ಲಿ. ನನ್ನ ಅಧ್ಯಯನದ ಒಳವಿವರಗಳಿಗೆ ಸಂಬಂಧಿಸಿದಂತೆ ಪ್ರತಿ ಕ್ಷೇತ್ರಕ್ಕೂ ದೊರೆತ ಪರಿಣತ ವಕ್ತೃಗಳ ಸಂಖ್ಯೆ ದೊಡ್ಡದು. ಸಾಮಾನ್ಯರಂತೆ ಕಾಣುತ್ತಿದ್ದ ರೈತರೋ ಮತ್ತೊಬ್ಬರೋ ಕೊಡುತ್ತಿದ್ದ ಜೀವನ ವಿವರದ ಹೊಳಹುಗಳೂ ಅತಿಶಯವಾಗಿದ್ದವು. ಪ್ರತಿಯೊಬ್ಬರೂ ತಮ್ಮ ವಿಷಯಗಳನ್ನು ಬಲವಾಗಿ ಪ್ರತಿಪಾದಿಸುತ್ತಿದ್ದವರೇ. ಹೀಗಾಗಿ ನನಗೆ ದೊರೆತ ಮಾಹಿತಿಯಲ್ಲಿ ಅನುಮಾನ, ವಿರೋಧಾಭಾಸ, ಅನಿರ್ದಿಷ್ಟತೆ ಮಾತ್ರವಲ್ಲ ವಾಸ್ತವಭಿನ್ನವಾದ ಸೂಕ್ಷ್ಮಜಿಜ್ಞಾಸೆ ಮೊದಲಾದವು ಕಂಡಾಗಲೆಲ್ಲಾ ಮತ್ತೆ ಮತ್ತೆ ಕ್ಷೇತ್ರಕಾರ್ಯಮಾಡಿ ಪತ್ರ ಸಂಪರ್ಕವನ್ನೂ ಮಾಡಿ ಪುನರ್ ಸಂದರ್ಶನಗಳನ್ನು ನಡೆಸಿ ಹೆಚ್ಚಿನ ವಕ್ತೃಗಳನ್ನು ಕಂಡು ತೀರ್ಮಾನಗಳಿಗೆ ಬಂದಿದ್ದೇನೆ. ಇದಕ್ಕಾಗಿ ಅನ್ಯ ಸಮುದಾಯಗಳನ್ನು ಅಧ್ಯಯನ ಮಾಡುವ ಸಂದರ್ಭಗಳೂ ಬಂದಿವೆ. ನಿಬಂಧವನ್ನು ನಿರ್ದಿಷ್ಟ ಅವಧಿಯಲ್ಲಿ ಮುಗಿಸಬೇಕೆಂಬುದಕ್ಕಾಗಿ ಮಾಹಿತಿಯ ಸಮಗ್ರ ಸಂಗ್ರಹ ಮತ್ತು ಖಚಿತತೆಯ ವಿಷಯದಲ್ಲಿ ರಾಜಿಮಾಡಿಕೊಂಡಿಲ್ಲ. ವಾಸ್ತವವಾಗಿ ನನ್ನ ನಿಬಂಧದಲ್ಲಿ ಪ್ರತಿಪಾದಿಸಲಾದ ವಿಷಯಗಳು ವಿಸ್ತೃತ ಅಧ್ಯಯನದ ಹಿನ್ನೆಲೆಯಲ್ಲಿ ಆಶ್ಚರ್ಯಕರ ರೀತಿಯಲ್ಲಿ ಹೆಚ್ಚು ಸಮರ್ಥನೆಗೊಂಡಿವೆ ಮತ್ತು ಗಟ್ಟಿಯಾಗಿವೆ.

ನಿಬಂಧದಲ್ಲಿ ಲೋಪವು ಕಾಣದಿದ್ದರೂ ನೂರಾರು ಹೊಸ ಅನುಮಾನಗಳು ತಲೆ ಎತ್ತಿವೆ. ನೂರಾರು ಹೊಸ ಸಾಧ್ಯತೆಗಳು ತೆರೆದುಕೊಳ್ಳುತ್ತಿವೆ. ಹೆಚ್ಚಿನ ಸಂಶೋಧನೆಗೆ ಬಾಗಿಲು ತೆರೆದ ನೂರಾರು ಮಗ್ಗುಲುಗಳೂ ಕಾಣುತ್ತಿವೆ. ಜತೆಗೇ ನಮ್ಮ ಮುಂದಿರುವ ಕಾಲಮಿತಿ, ದೈಹಿಕ ಶಕ್ತಿಯ ಮಿತಿ, ಆರ್ಥಿಕ ಮಿತಿಗಳು ನಿರಾಸೆಯನ್ನುಂಟುಮಾಡುತ್ತಿವೆ.

**21. ಸಂಕೇತಿ ಸಮುದಾಯದ ವಿಷಯದಲ್ಲಿ ನಿಮ್ಮನ್ನು ಆಕರ್ಷಿಸಿದ ಸಾಂಪ್ರದಾಯಿಕ ಚಿತ್ರ ಎಂಥದು?**

ಮಣ್ಣುಮುಟ್ಟಿ ಕಠಿಣ ದುಡಿಮೆ, ಅದರಿಂದ ಉಂಟಾದ ಸದೃಢವೂ ಆರೋಗ್ಯಕರವೂ ಆದ ಶರೀರ, ಅದು ಹೊಮ್ಮಿಸಿದ ಜೀವನೋತ್ಸಾಹ, ವೇದೋಪನಿಷತ್ತುಗಳು ಶಾಸ್ತ್ರಗಳು ಮೊದಲಾದ ಪಾರಂಪರಿಕ ವಿದ್ಯೆಗಳಲ್ಲಿ ಪರಿಣತಿ, ಶಾರೀರಿಕ ದೃಢತೆಯಿಂದಾಗಿ ವೇದಘೋಷದಲ್ಲುಂಟಾದ ಸ್ಪಷ್ಟ, ದೃಢ, ಸಕ್ರಮ ನಾದವಿಶೇಷ, ತಾವು ನೆಲೆಸಿದ ಮೂರೂ

ರಾಜ್ಯಗಳಲ್ಲೂ ಪೌರೋಹಿತ್ಯದ ಪ್ರಾವೀಣ್ಯದ ಹೆಗ್ಗಳಿಕೆ. ಕೃಷಿಕರಾದುದರಿಂದ ಉಂಟಾದ ಸರಳಜೀವನ, ನೇರನಡೆ, ಮನೋವೈಶಾಲ್ಯ, ಹೃದಯವಂತಿಕೆ. ತಾವೇ ಬೆಳೆಸಿದ ತೋಟಗಳಲ್ಲಿ ಏಕಾಂತದಲ್ಲಿ ಮಾಡಿದ ವೇದಾಧ್ಯಯನ, ಶಾಸ್ತ್ರಾಧ್ಯಯನ, ಸೃಷ್ಟಿಸಿದ ಆಶ್ರಮಸದೃಶ ಪರಿಸರ, ಮನೋರಂಜನೆಗಾಗಿ ರೂಢಿಸಿಕೊಂಡ ಸಂಗೀತ, ಗಮಕದ ಮೂಲಕ ಮಾಡಿದ ಸಾಹಿತ್ಯ ಸಲ್ಲಾಪ ಮತ್ತು ಪ್ರಚಾರ. ಪಗಡೆ, ಛಸ್, ಇಸ್ಪಿಟ್ ಆಟಗಳನ್ನೂ, ನಶ್ಯವನ್ನೂ ದುಡಿಸಿಕೊಂಡ ರೀತಿ, ನಿಯತವಾದ ನಿತ್ಯನೈಮಿತ್ತಿಕ ಕರ್ಮಾನುಷ್ಠಾನದ ಮೂಲಕ ತಮ್ಮ ಲೌಕಿಕ ಜೀವನಕ್ಕೆ ಕೊಟ್ಟ ಧಾರ್ಮಿಕ ಚೌಕಟ್ಟು, ಚಿಂತನೆಯಲ್ಲಿ ರೂಢಿಸಿಕೊಂಡ ವೇದಾಂತ ಮತ್ತು ಅದರಿಂದ ಸಾಧಿಸಿದ ನಿರ್ಮೋಹ. ಬಂಧುಬಾಂಧವರಲ್ಲಿ ನಿಕಟ ಸಂಪರ್ಕ, ಒಡನಾಟ, ಸಹಕಾರ; ಸಾಮಾಜಿಕ ಸಮಸ್ಯೆಗಳನ್ನು ದೇವರ ಸನ್ನಿಧಿಯಲ್ಲಿ ಪರಿಹರಿಸಿಕೊಂಡ ಬಗೆ, ಒಪ್ಪಿತ ಮಾರ್ಗದಲ್ಲಿ ನಡೆದು ಸಾಧಿಸಿದ ಕೌಟುಂಬಿಕ ಹದ, ಇತರ ಸಮುದಾಯಗಳ ಜತೆಗಿನ ಸೌಹಾರ್ದ. ಒಟ್ಟಾಗಿ ಕಂಡುಕೊಂಡ ಅಲ್ಪತೃಪ್ತಿ, ಶಾಂತಿ, ಸಮಾಧಾನ, ಸಮರಸ.

**22. ಈ ಚಿತ್ರಕ್ಕೆ ಆಧುನಿಕತೆ ಸಹ್ಯವೆ?**

ಆಧುನಿಕತೆ ಎಂದರೆ ವಿಜ್ಞಾನ, ತಂತ್ರಜ್ಞಾನ ಮತ್ತು ಮಾನವಿಕಗಳಲ್ಲಿ ಉಂಟಾದ ಕ್ರಾಂತಿ; ಪ್ರಜಾಪ್ರಭುತ್ವ ವ್ಯವಸ್ಥೆ. ಯಾವ ವ್ಯವಸ್ಥೆಯಲ್ಲಿಯೂ ಅಪಾರ್ಥ, ಅಪಬಳಕೆ, ಅತಿರೇಕಗಳ ವಿಕೃತಿ ಸಲ್ಲದು. ಸಮಾನತೆ, ಸರ್ವೋದಯ ಮತ್ತು ನೆಮ್ಮದಿಗಾಗಿ ಇವು ಬಳಕೆಯಾದರೆ ಅದೊಂದು ವರ. ಅತಿ ಒತ್ತಡ, ಅನಾರೋಗ್ಯಕರ ಪೈಪೋಟಿ, ಅತಿ ನಿರೀಕ್ಷೆ ಇಂಥವು ವರ್ಜ್ಯ. ಹಳೆಯದರ ದೃಢವಾದ ಬೇರು, ಹೊಸತರ ನವಿರಾದ ಚಿಗುರು ಸೇರಿ ಹೊಮ್ಮಿಸುವ ನಕ್ಕು ತಂಪೆರೆಯುವ ಸುವಾಸನೆಯ ಸುಂದರ ಪುಷ್ಪವು ಸ್ವಾಗತಾರ್ಹವಾದದ್ದು. ಸಂಕೇತಿ ಸಮುದಾಯದ ಬಹುದೊಡ್ಡ ಭಾಗವು ಈಗ ಅತ್ಯಾಧುನಿಕತೆಯನ್ನು ಅಪ್ಪಿದೆ, ಅನೇಕರು ಅದರ ಮೊನೆಗಳ ಮುಂಚೂಣಿಯಲ್ಲಿದ್ದಾರೆ.

**23. ಸದ್ಯದ ಭಾರತದ ಸಾಮಾಜಿಕ ಸನ್ನಿವೇಶದಲ್ಲಿ ಅಂಥ ಹೊಸ ಹದಕ್ಕೆ ಇರಬೇಕಾದ ಪಾತಳಿ ಎಂಥದು ಎನ್ನುತ್ತೀರಿ?**

1. ಛಿದ್ರಾನ್ವೇಷಣೆಯಲ್ಲ, ಆತ್ಮನಿರೀಕ್ಷಣೆ (Introspection)
2. ಪರನಿಂದೆಯಲ್ಲ, ಪರಹಿತ (Concern for others)
3. ಎಲ್ಲವೂ ಮಾನವನ ಸಮಸ್ಯೆ (Human problems) ಎಂಬ ನೆಲೆಯಲ್ಲಿ ಪರಿಹಾರೋಪಾಯಕ್ಕೆ ವಸ್ತುನಿಷ್ಠ ನಡೆ (Objectivity).
4. ಪೂರ್ವಗ್ರಹವಿಲ್ಲದ ತೆರೆದ ಮನ (Open-mindedness)
5. ಶುದ್ಧ ವೈಚಾರಿಕತೆ (Absolute thinking)
6. ವೈಜ್ಞಾನಿಕ ಮನೋಭಾವ (Scientific outlook)
7. ಮಾನವೀಯತೆ (Humanity)

ಮನಸ್ಸನ್ನು ಹೀಗೆ ಅಣಿಗೊಳಿಸಿದರೆ ಎಲ್ಲ ಸಮಸ್ಯೆಗಳೂ ತಮಗೆ ತಾವೇ ಪರಿಹಾರವಾಗುತ್ತವೆ ಅಥವಾ ಸಮಸ್ಯೆಗಳೇ ಇರುವುದಿಲ್ಲ.